ವಿಚಾರಣಾ ಆಯೋಗಗಳ ಕುರಿತು

2061 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ ನೇಮಿಸಿರುವ ವಿಚಾರಣಾ ಆಯೋಗಗಳು ಎಷ್ಟು? ಅವುಗಳು ಯಾವುವು? ಯಾವ ಕಾರಣಕ್ಕಾಗಿ ನೇಮಿಸಲಾಗಿತ್ತು.

ಆ) ಅವುಗಳಲ್ಲಿ ವರದಿ ಕೊಟ್ಟಂಥವು ಎಷ್ಟು? ವರದಿಯ ಸಾರಾಂಶವೇನು?

ಇ) ಸದರಿ ವರದಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳಲಾಗಿರುವ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ) 11-ವಿವರಗಳನ್ನು ಅನುಬಂಧ - 1ರಲ್ಲಿ ನೀಡಲಾಗಿದೆ.

ಆ) 5 ವಿಚಾರಣಾ ಆಯೋಗಗಳು ವರದಿಕೊಟ್ಟಿರುತ್ತವೆ. ವಿವಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಅನುಬಂಧ - 1

1. ನ್ಯಾಯಮೂರ್ತಿ ಎಂ.ಎಸ್. ಪಾಟೀಲ್ ವಿಚಾರಣಾ ಆಯೋಗ - ದಿನಾಂಕ :8-6-92 ರಂದು ಕುಣಿಗಲ್‌ನಲ್ಲಿ ನಡೆದ ಪೋಲಿಸ್ ಗೋಲೀಬಾರ್ ಬಗ್ಗೆ ವಿಚಾರಣೆ ನಡೆಸಲು.

2. ನ್ಯಾಯಮೂರ್ತಿ ಕದಂಬಾಡಿ ಜಗನ್ನಾಥಶೆಟ್ಟಿ ವಿಚಾರಣಾ ಆಯೋಗ - ಏಪ್ರಿಲ್ 1993ರ ನಂತರ ಭಟ್ಕಳ ನಗರದಲ್ಲಿ ನಡೆದ ಪ್ರಕರಣದಲ್ಲಿ 17 ಜನರು ಸಾವಿಗೀಡಾದ ಬಗ್ಗೆ ವಿಚಾರಣೆ ನಡೆಸಲು.

3. ಶ್ರೀ ಬಿ.ಕೆ. ಸಂಗಲದ್ ವಿಚಾರಣಾ ಆಯೋಗ - ದಿನಾಂಕ : 24.1.94 ರಂದು ಗುಲ್ಬರ್ಗಾ ನಗರದಲ್ಲಿ ನಡೆದ ಪೋಲಿಸ್ ಬಲಪ್ರಯೋಗದ ಬಗ್ಗೆ.

4. ಶ್ರೀ ಕೆ.ಎನ್. ಕೇಶವ ನಾರಾಯಣ ವಿಚಾರಣಾ ಆಯೋಗ - ದಿನಾಂಕ : 6-6-1994 ರಂದು ಕೋಲಾರದಲ್ಲಿ ನಡೆದ ಪೋಲಿಸ್ ಬಲಪ್ರಯೋಗದ ಬಗ್ಗೆ ವಿಚಾರಣೆ ನಡೆಸಲು.

5. ನ್ಯಾಯಮೂರ್ತಿ ಎಸ್.ಆರ್. ರಾಜಶೇಖರಮೂರ್ತಿ ವಿಚಾರಣಾ ಆಯೋಗ - ದಿನಾಂಕ : 15-8-1994 ರಂದು ಹುಬ್ಬಳ್ಳಿಯಲ್ಲಿ ನಡೆದ ಪೋಲಿಸ್ ಗೋಲೀಬಾರ್ ಬಗ್ಗೆ (ಈದ್ಗಾ ಪ್ರಕರಣ).

6. ನ್ಯಾಯಮೂರ್ತಿ ಮುರಳೀಧರರಾವ್ ವಿಚಾರಣಾ ಆಯೋಗ - ದಿನಾಂಕ 21-3-95 ರಂದು ಹುಬ್ಬಳ್ಳಿಯಲ್ಲಿ ನಡೆದ ಪೋಲಿಸ್ ಗೋಲಿಬಾರ್ ಬಗ್ಗೆ (ಹೋಳಿ ಪ್ರಕರಣ).

7. ನ್ಯಾಯಮೂರ್ತಿ ಬಿ.ಎನ್. ಕೃಷ್ಣನ್ ವಿಚಾರಣಾ ಆಯೋಗ - ದಿನಾಂಕ 23-4-95ರಂದ ಗೋಕಾಕ್ ತಾಲ್ಲೂಕಿನ ಕೊಣ್ಣೂರು ಗ್ರಾಮದಲ್ಲಿ ನಡೆದ ಪೋಲೀಸ್ ಗೋಲೀಬಾರ್ ಬಗ್ಗೆ

8. ನ್ಯಾಯಮೂರ್ತಿ ಎನ್.ಡಿ.ವಿ. ಭಟ್ ವಿಚಾರಣಾ ಆಯೋಗ - ದಿನಾಂಕ 14-11-95ರಂದ ಬೆಂಗಳೂರು ದೇವರಜೀವನ ಹಳ್ಳಿಯಲ್ಲಿರುವ ಡಾ: ಬಿ.ಆರ್. ಅಂಬೇಡ್ಕರ್ ವೈದ್ಯಕೀಯ ಕಾಲೇಜಿನಲ್ಲಿ ಡಾ: ಅಂಬೇಡ್ಕರ್‌ರವರ ಪ್ರತಿಮೆಗೆ ಅಪಮಾನಗೊಳಿಸಿದ ಬಗ್ಗೆ.

9. ಶ್ರೀ ಎನ್.ಎಸ್. ಸಂಗೋಳ್ಳಿ ವಿಚಾರಣಾ ಆಯೋಗ - ದಂತಚೋರ ವೀರಪ್ಪನ್ ಸಹಚರರಾದ ಅರ್ಜುನನ್, ಅಯ್ಯನ್ ದೊರೈ ಮತ್ತು ರಂಗಸ್ವಾಮಿ ಇವರ ಸಾವಿನ ಕುರಿತು.

10. ನ್ಯಾಯಮೂರ್ತಿ ಶ್ರೀ ಕೆ. ರಾಮಚಂದ್ರಯ್ಯ ವಿಚಾರಣಾ ಆಯೋಗ - ದಿನಾಂಕ : 10-4-96 ರಂದು ಡಾ: ಯು.ಆರ್. ಚಿತ್ತರಂಜನ್, ಶಾಸಕರು, ಭಟ್ಕಳ ಇವರ ಸಾವಿನ ಕುರಿತು.

11. ನ್ಯಾಯಮೂರ್ತಿ ಡಿ.ಪಿ. ಹಿರೇಮಠ್ ವಿಚಾರಣಾ ಆಯೋಗ - (1) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಮನಗರ ತಾಲ್ಲೂಕಿನ ಹೆಜ್ಜಾಲದಲ್ಲಿ ದಿನಾಂಕ : 3.2.97 ರಂದು ವಳ್ಳಿಯಪ್ಪ ಟೆಕ್ಸ್‌ಟೈಲ್ಸ್‌ನ ಕಾರ್ಮಿಕರು ನಡೆಸಿದ ರಸ್ತೆ ತಡೆ ಪ್ರತಿಭಟನೆಯಲ್ಲಿ ನಡೆದ ಗಲಭೆ ಮತ್ತು ಪೋಲಿಸ್ ಗೋಲೀಬಾರ್ ಬಗ್ಗೆ ಹಾಗೂ (2) ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ದಿನಾಂಕ : 13:14.12.96ರಂದು ನಡೆದ ಘರ್ಷಣೆ ಮತ್ತು ಪೋಲೀಸ್ ಗೋಲೀಬಾರ್ ಕುರಿತು.

ಅನುಬಂಧ - 2

ನ್ಯಾಯಮೂರ್ತಿ ಎಂ.ಎಸ್. ಪಾಟೀಲ್ ವಿಚಾರಣಾ ಆಯೋಗ :

ದಿನಾಂಕ 8.6.92 ರಂದು ಕುಣಿಗಲ್‌ನಲ್ಲಿ ನಡೆದ ಪೋಲೀಸ್ ಗೋಲಿಬಾರ್ ಬಗ್ಗೆ ವಿಚಾರಣೆ ನಡೆಸಲು ಈ ಆಯೋಗವನ್ನು ದಿನಾಂಕ 26.12.92 ರಂದು ರಚಿಸಲಾಯಿತು. ಈ ಆಯೋಗವು ತನ್ನ ವರದಿಯನ್ನು ಸರ್ಕಾರಕ್ಕೆ ದಿನಾಂಕ 29.4.97 ರಂದು ಸಲ್ಲಿಸಿದೆ.

ಈ ವರದಿಯ ಶಿಫಾರಸ್ಸಿನ ಮೇರೆಗೆ ಅಂದಿನ ಸಚಿವರಾದ ಶ್ರೀ ಎಸ್. ರಮೇಶ್ ರವರು ಮತಗಟ್ಟೆಗೆ ಹೋಗುವುದನ್ನು ತಡೆಯುವಲ್ಲಿ ಕ್ರಮ ಕೈಗೊಳ್ಳುವ ಬಗ್ಗೆ ಜಿಲ್ಲಾಧಿಕಾರಿ (ಚುನಾವಣಾಧಿಕಾರಿ) ಮತ್ತು ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಇವರುಗಳು ವಿಫಲರಾಗಿರುವುದರಿಂದ, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಇನ್ನು ಮುಂದೆ ಈ ರೀತಿಯ ಪ್ರಕರಣಗಳು ಪುನರಾವರ್ತನೆ ಆಗದಂತೆ ಕಾರ್ಯನಿರ್ವಹಿಸಬೇಕೆಂದು ಸೂಕ್ತಸೂಚನೆಗಳನ್ನು ನೀಡಲಾಗಿದೆ.

ಭದ್ರತಾ ಕಾವಲು ಸಿಬ್ಬಂದಿಯು ತಮಗೆ ವಹಿಸಿರುವ ಆಯುಧಗಳನ್ನು ಬಳಸುವ ಬಗ್ಗೆ ಸರಿಯಾದ ಮಾರ್ಗಸೂಚಿಗಳು ಇರುವುದಿಲ್ಲವೆಂದು ವಿಚಾರಣಾ ಆಯೋಗದ ಅಭಿಪ್ರಾಯದ ಮೇರೆಗೆ ಭದ್ರತಾ ಕಾವಲು ಸಿಬ್ಬಂದಿಯು ಆಯುಧಗಳನ್ನು ಬಳಸುವ ಕುರಿತು ಸೂಕ್ತ ಮಾರ್ಗಸುಚಿಗಳನ್ನು ಹೊರಡಿಸಲಾಗಿದೆ.

ಮಾಜಿ ಸಚಿವರಾದ ಶ್ರೀ ಎಸ್. ರಮೇಶ್ ಮತ್ತು ಅಂದಿನ ಅವರ ಗನ್‌ಮ್ಯಾನ್ ಆಗಿದ್ದ ಶ್ರೀ ಎ. ಕೃಷ್ಣಪ್ಪ ಇವರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ಹಾಕಬೇಕಾಗಿ ಮತ್ತು ದಂಡ ಪ್ರಕ್ರಿಯೆ ಸಂಹಿತೆ ಕಲಂ 173(8) ರ ಕೆಳಗೆ ಮುಂದಿನ ತನಿಕೆಯನ್ನು ಕೈಗೊಳ್ಳಬೇಕಾಗಿ ಡೈರೆಕ್ಟರ್ ಜನರಲ್ ಮತ್ತು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಅವರನ್ನು ಕೋರಲಾಯಿತು. ಸದರಿ ವಿಷಯದಲ್ಲಿ ಮುಂದಿನ ತನಿಕೆಯನ್ನು ಕೈಗೊಳ್ಳಲು ಈಗಾಗಲೇ 'ಬಿ' ವರದಿಯನ್ನು ಸಲ್ಲಿಸಿದ ತನಿಖಾಧಿಕಾರಿಯನ್ನು ಬಿಟ್ಟು ಬೇರೆ ತನಿಖಾಧಿಕಾರಿಯನ್ನು ನೇಮಿಸಬೇಕಾಗಿ ಹಾಗೂ ಕುಣಿಗಲ್ ನ್ಯಾಯಾಲಯದಲ್ಲಿ ಈಗಾಗಲೇ ಸಲ್ಲಿಸಿದೆ. 'ಬಿ' ಅಂತಿಮ ವರದಿಯನ್ನು ಒಪ್ಪಿಕೊಂಡಿರುವುದರಿಂದ ಆ ನ್ಯಾಯಾಲಯಕ್ಕೆ ತನಿಖಾಧಿಕಾರಿಯು ಒಂದು ಅರ್ಜಿಯನ್ನು ಸಲ್ಲಿಸಿ, ಹೊಸದಾಗಿ ಕಂಡುಬಂದ ಸಾಕ್ಷಾಧಾರಗಳ ಮೇಲಿಂದ ದಂಡ ಪ್ರಕ್ರಿಯಾ ಸಂಹಿತೆ ಕಲಂ 173 (8)ರ ಕೆಳಗೆ ತನಿಖೆಯನ್ನು ತೆಗೆದುಕೊಳ್ಳುತ್ತಿರುವುದಾಗಿ ತಿಳಿಸಬೇಕಾಗಿ ಡೈರೆಕ್ಟರ್ ಜನರಲ್ ಮತ್ತು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ರವರಿಗೆ ಸೂಚಿಸಲಾಗಿದೆ.

ಮಾಜಿ ಸಚಿವರಾದ ಶ್ರೀ ಎಸ್. ರಮೇಶ್ ರವರ ಅಂದಿನ ಗನ್‌ಮ್ಯಾನ್ ಆಗಿದ್ದ ಶ್ರೀ ಎ.ಕೃಷ್ಣಪ್ಪ ಇವರು ತಮ್ಮ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ : 8327:96 (ಜಿಎಂ) ಸಲ್ಲಿಸಿದ್ದು, ಉಚ್ಚ ನ್ಯಾಯಾಲಯವು ತಡೆಯಾಜ್ಞೆಯನ್ನು ನೀಡಿರುತ್ತದೆ. ಆದರೆ ಸದರಿ ತಡೆಯಾಜ್ಞೆಯನ್ನು ಹಿಂತೆಗೆದುಕೊಳ್ಳುವವರೆಗೆ ಈ ವಿಷಯದಲ್ಲಿ ಯಾವುದೇ ತನಿಖೆಯನ್ನು ಮುಂದುವರಿಸಲು ಆಗುವುದಿಲ್ಲವೆಂದು ಡೈರೆಕ್ಟರ್ ಜನರಲ್ ಆಫ್ ಪೋಲಿಸ್ ರವರು ಅಭಿಪ್ರಾಯ ಪಟ್ಟಿದ್ದಾರೆ.

ಸದರಿ ತಡೆಯಾಜ್ಞೆಯನ್ನು ತೆರವು ಮಾಡಿಸಲು ಕೋರಿ ಅರ್ಜಿಯನ್ನು ಸಲ್ಲಿಬೇಕಾಗಿ ಕಾನೂನು ಇಲಾಖೆಯು ಸರ್ಕಾರಿ ವಕೀಲರಿಗೆ ಸೂಚಿಸಿದೆ.

ನ್ಯಾಯಮೂರ್ತಿ ಕೆ.ಜಗನ್ನಾಥ ಶೆಟ್ಟಿ ವಿಚಾರಣಾ ಆಯೋಗ

ಏಪ್ರಿಲ್ 1993ರ ನಂತರ ಭಟ್ಕಳ ನಗರದಲ್ಲಿ ನಡೆದ ಗಲಭೆ ಪ್ರಕರಣದಲ್ಲಿ 17 ಜನರು ಸಾವಿಗೀಡಾದ ಬಗ್ಗೆ ವಿಚಾರಣೆ ನಡೆಸಲು ಈ ಆಯೋಗವನ್ನು ದಿನಾಂಕ 16-9-93 ರಂದು ಸಚಿಸಲಾಯಿತು. ಈ ಆಯೋಗವು ತನ್ನ ವರದಿಯನ್ನು ದಿನಾಂಕ 27-2-97ರಂದು ಸರ್ಕಾರಕ್ಕೆ ಸಲ್ಲಿಸಿದೆ. ಈ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ.ಕೆ. ಸಂಗಲದ್ ವಿಚಾರಣಾ ಆಯೋಗ

ದಿನಾಂಕ 24.1.94 ರಂದು ಗುಲ್ಬರ್ಗಾ ನಗರದಲ್ಲಿ ನಡೆದ ಪೋಲೀಸ್ ಬಲಪ್ರಯೋಗದ ಬಗ್ಗೆ ವಿಚಾರಣೆ ನಡೆಸಲು ಈ ಆಯೋಗವನ್ನು ದಿನಾಂಕ 15.3.94 ರಂದು ರಚಿಸಲಾಯಿತು. ಈ ಆಯೋಗವು ತನ್ನ ವರದಿಯನ್ನು ಸರ್ಕಾರಕ್ಕೆ ದಿನಾಂಕ 30-11-95 ರಂದು ಸಲ್ಲಿಸಿದೆ. ಈ ವರದಿಯನ್ನು ಸರ್ಕಾರವು ಒಪ್ಪಿಕೊಂಡಿದೆ. ಸದರಿ ವರದಿಯಲ್ಲಿ ಶಿಫಾರಸಿನಲ್ಲಿ "ಮೆರವಣಿಗೆಕಾರರು ಮತ್ತು ಇತರರೊಂದಿಗೆ

ಪೋಲೀಸರು ತದನಂತರ ವರ್ತಿಸಿದ ಕಾರ್ಯವು ನ್ಯಾಯಸಮ್ಮತವಲ್ಲ" ಎಂದು ತಿಳಿಸಿರುವ ಮೇರೆಗೆ ಈ ಬಗ್ಗೆ ಬಂಧಿತ ವ್ಯಕ್ತಿಗಳೊಂದಿಗೆ ವರ್ತಿಸುವಾಗ ಹೆಚ್ಚು ಮಾನವೀಯತೆಯಿಂದ ಮತ್ತು ಸಂಯಮದಿಂದ ವರ್ತಿಸಲು ಪೋಲೀಸ್ ಅಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡಲಾಗಿದೆ.

ನ್ಯಾಯಮೂರ್ತಿ ಎನ್.ಡಿ.ವಿ. ಭಟ್ ವಿಚಾರಣಾ ಆಯೋಗ

ದಿನಾಂಕ 14.11.95ರಂದು ಬೆಂಗಳೂರಿನ ದೇವರಜೀವನಹಳ್ಳಿಯ ಡಾ: ಬಿ.ಆರ್. ಅಂಬೇಡ್ಕರ್ ವೈದ್ಯಕೀಯ ಮಹಾ ವಿದ್ಯಾಲಯದಲ್ಲಿ ಡಾ: ಅಂಬೇಡ್ಕರ್ ಪ್ರತಿಮೆಯನ್ನು ಅಪಮಾನಗೊಳಿಸಿದ ಬಗ್ಗೆ ವಿಚಾರಣೆ ನಡೆಸಲು ದಿನಾಂಕ 2.2.96 ರಂದು ಈ ವಿಚಾರಣಾ ಆಯೋಗವನ್ನು ರಚಿಸಲಾಯಿತು. ಈ ವಿಚಾರಣಾ ಆಯೋಗವು ಸರ್ಕಾರಕ್ಕೆ ತನ್ನ ವರದಿಯನ್ನು ದಿನಾಂಕ 28.2.97 ರಂದು ಸಲ್ಲಿಸಿತು. ಈ ವಿಚಾರಣಾ ಆಯೋಗದ ವರದಿಯನ್ನು ಒಪ್ಪಿಕೊಂಡು ವರದಿಯಲ್ಲಿ ಸೂಚಿಸಿರುವ ವಿದ್ಯಾರ್ಥಿಗಳ ವಿರುದ್ಧ ಕ್ರಮವೇನೂ ಕೈಗೊಳ್ಳದಿರಲು ಸರ್ಕಾರವು ತೀರ್ಮಾನಿಸಿತು.

ಶ್ರೀ ಎನ್. ಎಸ್. ಸಂಗೋಳ್ಳಿ ವಿಚಾರಣಾ ಆಯೋಗ

ವೀರಪ್ಪನ್ ಸಹಚರರಾದ ಆರ್ಜುನನ್, ಅಯ್ಯನ್ ದೊರೈ ಮತ್ತು ರಂಗಸ್ವಾಮಿ ಇವರುಗಳ ಸಾವಿನ ಕುರುತು ವಿಚಾರಣೆ ನಡೆಸಲು ದಿನಾಂಕ 4.4.96 ರಂದು ಈ ವಿಚಾರಣಾ ಆಯೋಗವನ್ನು ರಚಿಸಲಾಯಿತು. ಈ ವಿಚಾರಣಾ ಆಯೋಗವು ದಿನಾಂಕ 31.1. 97ರಂದು ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ಮೇಲ್ಕಂಡ ಮೂರು ಜನರ ಮರಣವು ಆತ್ಮಹತ್ಯೆಯಾಗಿರುತ್ತದೆ ಮತ್ತು ಈ ಘಟನೆಗೆ ಸಂಬಂಧಿಸಿದಂತೆ ಎಸ್ಕಾರ್ಟ್ ಪಾರ್ಟಿಯವರ ನಿರ್ಲಕ್ಷ್ಯ ಅಥವಾ ಲೋಪ ಇರಲಿಲ್ಲವೆಂದು ವಿಚಾರಣಾ ಆಯೋಗವು ತನ್ನ ವರದಿಯಲ್ಲಿ ಅಭಿಪ್ರಾಯಪಟ್ಟಿರುತ್ತದೆ. ಸರ್ಕಾರವು ಈ ವಿಚಾರಣಾ ಆಯೋಗದ ವರದಿಯನ್ನು ಒಪ್ಪಿಕೊಂಡಿರುತ್ತದೆ.

ಸಾರ್ವಜನಿಕರಿಗೆ ಪಡಿತರ ಚೀಟಿ ವಿತರಣೆ

2063 - ಶ್ರೀಮತಿ ಡಿ.ಜಿ. ಹೇಮಾವತಿ (ಶಾಂತಿನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಸಾರ್ವಜನಿಕರಿಗೆ ಪಡಿತರ ಚೀಟಿಗಳನ್ನು ವಿತರಣೆ ಮಾಡಲು ಬೇಕಾಗಿರುವ ದಾಖಲಾತಿಗಳು ಯಾವುವು?*

2) *ಪಡಿತರ ಚೀಟಿ ನೀಡಲು ಕಡಿತ ಪ್ರಮಾಣ ಪತ್ರ : ಅದ್ಯರ್ಪಣಾ ಪ್ರಮಾಣ ಪತ್ರ ನೀಡುವಂತೆ ತಿಳಿಸಿರುತ್ತಿರುವುದು ನಿಜವೇ?*

3) *ಸರ್ಕಾರ ಅನಗತ್ಯ ದಾಖಲಾತಿಗಳನ್ನು ಪಡೆಯದೇ ಪಡಿತರ ಚೀಟಿಗಳನ್ನು ವಿತರಿಸಲು ಕ್ರಮಕೈಗೊಳ್ಳುವುದೇ?*